ಸಾಕ್ಷಿಯನ್ನು ದಿಃ 16-12-2022 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.
ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎಮ್ ವಕೀಲರಿಂದಃ-

1. ನಾನು ಬೆಂಗಳೂರಿನಲ್ಲಿ ವಕೀಲ ವೃತ್ತಿಯನ್ನು ಸುಮಾರು 15 ವರ್ಷಗಳಿಂದ ಮಾಡುತ್ತಿದ್ದೇನೆ. ನಾನು ಮೊದಲು ಕೆ.ಇ.ಬಿ ಯಲ್ಲಿ ಡೆಪ್ಯೂಟಿ ಕಂಟ್ರೋಲರ್ ಆಪ್ ಅಕೌಂಟ್ಸ್ ಕೆಲಸವನ್ನು ಮಾಡುತ್ತಿದ್ದೆ.

2. ನಿಮಗೆ ಆರ್ಥಿಕ ವ್ಯವಹಾರಗಳು ಹೇಗೆ ಆಗುತ್ತವೆ ಎಂದು ಮಾಹಿತಿ ಇದೆ ಎಂದರೆ ಹೌದು.

3. ನೀವು ಯಾವ ಯಾವ ಪ್ರಕರಣಗಳಲ್ಲಿ ವಕೀಲ ವೃತ್ತಿಯನ್ನು ನಡೆಸುತ್ತಿದ್ದೀರಿ ಎಂದರೆ ನಾನು ಚಕ್ ಡಿಸ್ ಹಾನರ್ ಕೇಸ್, ಒರಿಜಿನಲ್ ಸಿವಿಲ್ ಸೂಟ್ಸ್ ನಲ್ಲಿ ಪ್ರಾಕ್ಟೀಸ್ ಮಾಡುತ್ತಿದ್ದೇನೆ.

4. ನಿಮಗೆ ವೆಂಕಟರೆಡ್ಡಿ ಯಾರೂ ಎಂದು ಹೇಳಲು ಬರುತ್ತದೆಯಾ ಎಂದರೆ ಅವರು ನಮ್ಮ ಏರಿಯಾದಲ್ಲಿ ಬ್ರೋಕರ್ ಆಗಿದ್ದಾರೆ. ಮೂರ್ತಿ ಎಮ್ ಯಾರೂ ಎಂದರೆ ಮೂರ್ತಿ ಎಮ್ ರವರು ವೆಂಕಟರೆಡ್ಡಿಯವರ ಜೊತೆಯಲ್ಲಿ ಇರುತ್ತಾರೆ. ನೀವು ನಿಮ್ಮ ಪಿರ್ಯಾದಿಯಲ್ಲಿ ವೆಂಕಟರೆಡ್ಡಿ ಯವರು ಬ್ರೋಕರ್ ಎಂದು ಹೇಳಿದ್ದೀರಾ ಎಂದರೆ ಇಲ್ಲ. ನಿಮಗೆ ಇನೋವಾ ಕಾರು ಯಾವ ಮಾಡಲ್ ಎಂದು ಹೇಳಲು ಬರುತ್ತದೆಯಾ ಎಂದರೆ ನನಗೆ ಈಗ ಜ್ಞಾಪಕ ಇಲ್ಲ ಏಕೆಂದರೆ ನನಗೆ ಈಗ 74 ವರ್ಷ. ನಿಮಗೆ ನೀವು ಹೇಳುವ ಈ ಇನೋವಾ ಕಾರಿನ ಎಷ್ಟನೇ ಮಾಲೀಕರು ಎಂದರೆ ನನಗೆ ಹೇಳಲು ಬರುವುದಿಲ್ಲ.

5. ನೀವು ನಿಮ್ಮ ಪಿರ್ಯಾದಿಯಲ್ಲಿ ಇನೋವಾ ಕಾರಿಗೆ ಹತ್ತು ಲಕ್ಷ ರೂಪಾಯಿ ಮೌಲ್ಯ ನಿಗದಿ ಪಡಿಸಿದ್ದೇನೆ ಎಂದು ಹೇಳಿದ್ದು ಈ ಹತ್ತು ಲಕ್ಷ ರೂಪಾಯಿ ಇನೋವಾ ಕಾರಿಗೆ ಕೊಡುವ ಮತ್ತು ತೆಗೆದುಕೊಳ್ಳುವ ಕುರಿತು ಯಾವುದಾದರೂ ಲಿಖಿತ ದಾಖಲಾತಿಯಾಯಿತಾ ಎಂದರೆ ಲಿಖಿತ ವಾಗಿ ಯಾವುದೇ ದಾಖಲಾತಿ ಆಗಿಲ್ಲ. ಸಾಕ್ಷಿಯು ಮುಂದುವರೆದು ಇನ್ಸೂರೆನ್ಸ್ ಕಾಪಿಯಲ್ಲಿನ ವ್ಯಾಲ್ಯೂ ಮತ್ತು ಮಾರ್ಕೇಟ್ ವ್ಯಾಲ್ಯೂ ಪ್ರಕಾರ 10,00,000/- ರೂಪಾಯಿ ನಿಗದಿಯಾಯಿತು.

6. ನಿಮಗೆ ನೀವು ಹೇಳುವ ಹಾಗೆ ಈ ಇನೋವಾ ಕಾರಿಗೆ 10,00,000/- ರೂಪಾಯಿ ಪಿಕ್ಸ್ ಆಗಿದ್ದರಾ ಬಗ್ಗೆ ಲಿಖಿತ ರೂಪದಲ್ಲಿ ಯಾವುದಾದರೂ ದಾಖಲಾತಿ ಮಾಡಿಕೊಳ್ಳಲು ನಿಮಗೆ ಅಡ್ಡಿ ಇತ್ತ ಎಂದರೆ ಏನೂ ಇರಲಿಲ್ಲ.

7. ನೀವು ಹೇಳುವ ಹಾಗೆ ವೆಂಕಟರೆಡ್ಡಿ ಮತ್ತು ಮೂರ್ತಿ ಯವರನ್ನು ಆರೋಪಿತರಿಗೆ ಯಾವ ತಿಂಗಳಲ್ಲಿ ಪರಿಚಯಿಸಿದಿರಿ ಎಂದರೆ ಅಕ್ಟೋಬರ್ 2014. ನಿಮಗೆ ಇನೋವಾ ಕಾರಿನ ನಂಬರ್ ಹೇಳಲು ಬರುತ್ತದೆಯಾ ಎಂದರೆ ಇಲ್ಲ ಏಕೆಂದರೆ ಈಗ ಬಹಳ ವರ್ಷವಾಗಿದೆ. ನೀವು ಹೇಳುವ ಈ ಇನೋವಾ ಕಾರ್ ಹಳದಿ ಬೋರ್ಡ್ ನದ್ದ ಅಥವಾ ಬಿಳಿ ಬೋರ್ಡ್ ನದ್ದ ಎಂದರೆ ಹಳದಿ ಬೋರ್ಡ್.

8. ನಿಮ್ಮ ದೂರಿನಲ್ಲಿ ನೀವು ಹೇಳಿದ ಫೈನಾನ್ಸ್ ಕಂಪಂನಿಯ ಹೆಸರನ್ನು ಹೇಳಲು ಬರುತ್ತದೆಯಾ ಎಂದರೆ ಜ್ಞಾಪಕ ಇಲ್ಲ. ನೀವು ನಿಮ್ಮ ದೂರಿನಲ್ಲಿ ಹೇಳಿದ ಆ ಫೈನಾನ್ಸ್ ಕಂಪನಿಯ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದರೆ ಮಾಹಿತಿ ಇದೆ. ಸಾಕ್ಷಿಯು ಮುಂದುವರೆದು ಆ ಇನೋವಾ ಕಾರಿನ ಮೇಲೆ ಫೈನಾನ್ಸ್ ಕಂಪನಿಯಿಂದ ಸಾಲ ಪಡೆದಿದ್ದಾರೆ. ನೀವು ಹೇಳುವ ಹಾಗೆ ಇನೋವಾ ಕಾರಿನ ಮೇಲೆ ಒಟ್ಟು ಎಷ್ಟು ಹಣದ ಸಾಲವನ್ನು ಪಡೆದಿದ್ದರೂ ಎಂದರೆ ಸುಮಾರು 16,00,000/- ರೂಪಾಯಿ ಹಣವನ್ನು ಸಾಲವಾಗಿ ಪಡೆದಿದ್ದರು. ಸಾಕ್ಷಿಯು ಮುಂದುವರೆದು ನಾನು ಇನೋವಾ ಕಾರ್ ಪಡೆದುಕೊಳ್ಳಬೇಕಾದರೆ ಅದರ ಮೇಲೆ ಸುಮಾರು 12,00,000/- ರೂಪಾಯಿ ಸಾಲ ಇತ್ತು. ನೀವು ಹೇಳುವ ಹಾಗೆ ನಿಮ್ಮ ದೂರಿನಲ್ಲಿ ಎಲ್ಲಾದರೂ ಇನೋವಾ ಕಾರಿಗೆ ಆಕ್ಸಿಡೆಂಟ್ ಆದ ವಿಷಯವನ್ನು ತಿಳಿಸಿದ್ದೀರಾ ಎಂದರೆ ಇಲ್ಲ. ನೀವು ಹೇಳುವ ಹಾಗೆ ಈ ಇನೋವಾ ಕಾರ್ ನೀವು ಪರ್ಚೇಸ್ ಮಾಡುವ ಮೊದಲೇ ನಿಮಗೆ ಇನೋವಾ ಕಾರ್ ಆಕ್ಸಿಡೆಂಟ್ ಆಗಿತ್ತು ಎಂದು ಮಾಹಿತಿ ಇತ್ತು ಎಂದರೆ ಇಲ್ಲ. ಸಾಕ್ಷಿಯು ಮುಂದುವರೆದು ನಾನು ವಾಹನ ಖರೀದಿ ಮಾಡುವ ಮೊದಲು ಗೇರೇಜ್ ನಲ್ಲಿ ವಾಹನವನ್ನು ತೋರಿಸಿದೆ. ಆಗ ಗ್ಯಾರೇಜ್ ನವರು ವಾಹನವು ಆಕ್ಸಿಡೆಂಟ್ ಆಗಿದೆ ಎಂದು ತೋರಿಸಿದರು. ನೀವು ಹೇಳುವ ಹಾಗೆ ಈ ಆಕ್ಸಿಡೆಂಟ್ ಆದ ಬಗ್ಗೆ ಆರೋಪಿತಳನ್ನು ನೀವು ಏನಾದರೂ ಕೇಳಿದಿರಾ ಎಂದರೆ ನಾನು ಆಕ್ಸಿಡೆಂಟ್ ಆದ ಬಗ್ಗೆ ಕೇಳಿದೆ ಆಗ ಆರೋಪಿತಳು ಆಕ್ಸಿಡೆಂಟ್ ಆಗಿರುವುದಕ್ಕಾಗಿಯೇ ಕಾರನ್ನು ಕಡಿಮೆ ಬೆಲೆ ರೂ.10,00,000/- ರೂಪಾಯಿಗೆ ಮಾರಾಟ ಮಾಡುತ್ತಿದ್ದೇನೆ ಎಂದು ತಿಳಿಸಿದರು.

9. ನೀವು ಹೇಳುವ ಹಾಗೆ ಆರೋಪಿತರನ್ನು ಅಕ್ಟೋಬರ್ 2014 ರಲ್ಲಿ ಪರಿಚಯವಾದಾಗ ಇನ್ಸೂರೆನ್ಸ್ , ಕಾಂಪ್ರೆಹೆನ್ಸೀವ್ ಇತ್ತ ಅಥವಾ ತರ್ಡ ಪಾರ್ಟಿ ಮಾತ್ರ ಇತ್ತ ಎಂದರೆ ಕಾಂಪ್ರೆಹೆನ್ಸೀವ್ ಇನ್ಸೂರೆನ್ಸ್ ಇತ್ತು.

10. ನೀವು ಹೇಳಿದ ಹಾಗೆ ಇನೋವಾ ಕಾರನ್ನು ಗ್ಯಾರೇಜ್ ಗೆ ತೆಗೆದುಕೊಂಡು ಹೋದಾಗ ಅದು ಡ್ರೈವೇಬಲ್ ಕಂಡೀಷನ್ ನಲ್ಲಿ ಇತ್ತ ಎಂದರೆ ಹೌದು. ನೀವು ಹೇಳುವ ಹಾಗೆ ಇನೋವಾ ಕಾರನ್ನು ಗ್ಯಾರೇಜ್ ಗೆ ಯಾರೂ ಡ್ರೈವ್ ಮಾಡಿಕೊಂಡು ಹೋದರು ಎಂದರೆ ನಾನು.

11. ನಿಮಗೆ ಗಾಡಿಯ ಇನ್ಸೂರೆನ್ಸ್ ಕ್ಲೇಮ್ ಆಗಿರುವ ಬಗ್ಗೆ ಮಾಹಿತಿ ಇದೆಯಾ ಎಂದರೆ ಇಲ್ಲ. ನಿಮಗೆ ಇನ್ಸೂರೆನ್ಸ್ ಕ್ಲೇಮ್ ಆಗಿರುವ ಬಗ್ಗೆ ಮಾಹಿತಿ ಪಡೆಯಲು ಯಾವುದಾದರೂ ತೊಂದರೆ ಇತ್ತ ಎಂದರೆ ಇಲ್ಲ.

12. ಅಕ್ಟೋಬರ್ ತಿಂಗಳು 2014 ರಲ್ಲಿ ಯಾವ ಸಮಯದಲ್ಲಿ ಆರೋಪಿತರ ಪರಿಚಯವಾಯಿತು ಎಂದರೆ ಆಗಸ್ಟ್2014 ರಲ್ಲಿ ಆರೋಪಿತರ ಪರಿಚಯ ನನಗೆ ಆಯಿತು.

13. ನೀವು ಹೇಳುವ ಹಾಗೆ ಆರೋಪಿತರು ಯಾವ ಯಾವಾಗ ಡಾಕ್ಯೂಮೆಂಟ್ಸ್ ಗಳನ್ನು ನಿಮಗೆ

ನೀಡಿದರು ಎಂದರು ಆಗಸ್ಟ್ 2014 ರಲ್ಲಿ . ನೀವು ಡಾಕ್ಯೂಮೆಂಟ್ಸ್ ಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೀರಾ ಎಂದರೆ ಹಾಜರು ಪಡಿಸಿದ್ದೇನೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

4 ನೇ ಅ ಮು ಮ ದಂ ನ್ಯಾ